# KARNATAKA LOKAYUKTA

NO:UPLOK-1/D.E -22/2019/ARE-9

M.S.Building,
Dr. B.R. Ambedkar Veedhi,
Bengaluru - 560 001.
Date: 24 -11-2023

## : : ENQUIRY REPORT : :

:: Present ::
SHUBHAVEER.B.
Additional Register of Enquiries-9,
Karnataka Lokayukta, Bengaluru.

Sub: Departmental Inquiry against Sri. Syed Mustak Ahamad, the then Assistant Executive Engineer, Rural Drinking Water and Sanitation Sub-Division, Harapanahalli, Byadgi, Haveri District - Reg.

Ref: 1. G.O.No. RDP 47 Enq 2018 Bengaluru, dated 12.11.2018.
2.Nomination Order No:UPLOK-1/DE-22/2019/ARE-9, Bengaluru, dated 21-1-2019.

This departmental enquiry is initiated against Sri. Syed Mustak Ahamad, the then Assistant Executive Engineer, Rural Drinking Water and Sanitation Sub-Division, Harapanahalli, Byadgi, Haveri District (hereinafter referred to as the Delinquent Government Official, for short "DGO").

2. In pursuance of the Government Order, cited above at reference No.1, Hon'ble Upalokayukta, vide order dated 21-1-2019,

cited above at reference No.2; has nominated Additional Registrar of Enquiries-9 (in short ARE-9) to frame Articles of charge and to conduct the inquiry against the aforesaid DGO.

3. This Authority (ARE-9) has issued the Articles of charge, statement of imputations of misconduct, list of witnesses proposed to be examined and list of documents proposed to be relied in support of the charges.

4. The Article of charges issued by the ARE-9 against the DGO is as infra :

ANNEXURE-I
CHARGE

ಆಸನೌ ಆದ ನೀವು –

1) ತುಮಕೂರು ತಾಲ್ಲೂಕ್ ಕಸಬಾ ಹೋಬಳಿ ವೀರ ಸಾಗರ ಗ್ರಾಮದ ಸರ್ವೆ ನಂ.7/1ಎ (ಅನ್ಯಕ್ರಾಂತವಾದ ಜಮೀನು) ರಲ್ಲಿ ನಿವೇಶನ ಸಂ.22 (30x50 ಚದರಡಿ) ಅನ್ನು ಶ್ರೀ.ಕೆ.ಟಿ.ಹರಿಪ್ರಸಾದ್ ರವರಿಂದ ದಿ:27/05/10 ರಂದು ರೂ.2,25,000/–ಗಳಿಗೆ ಆಸನೌ ರವರು ಖರೀದಿಸಿರುತ್ತೀರಿ. ಸದರಿ ಸ್ಥಿರ ಸ್ವತ್ತನ್ನು ಬ್ಯಾಂಕ್ ಸಾಲ ಮತ್ತು ಕೈಸಾಲ ದಿಂದ ಅರ್ಜಿಸಲಾಗಿದೆಯೆಂದು ತಿಳಿಸಿದ್ದು ಸದರಿ ಸ್ವತ್ತನ್ನು ಖರೀದಿಸುವ ಮೊದಲು ಆಸನೌ ಆದ ನೀವು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆಯಾಗಲೀ ಹಾಗೂ ಸ್ವತ್ತನ್ನು ಖರೀದಿ ಮಾಡಲು / ಅರ್ಜಿಸಲು ಆದಾಯ ಮೂಲವೆಂದು ಆಸನೌ ಆದ ನೀವು ಹೇಳಿದ ಬ್ಯಾಂಕ್ ಸಾಲ ಮತ್ತು ಕೈಸಾಲ ಪಡೆಯುವ ಮೊದಲು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

ಆದ್ದರಿಂದ, ಆಸನೌ ಆದ ನೀವು ಸೂಚಿತ/ ನಿರ್ದೇಶಿತ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಮೇಲೆ ಹೇಳಿದ ಸ್ಥಿರ ಸ್ವತ್ತನ್ನು ಖರೀದಿಸಿದ್ದು ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23 ಮತ್ತು 21(4) ಅನ್ನು ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

2) ಆಸನೌ ಆದ ನೀವು ನಿಮ್ಮ ಪತ್ನಿಯ ಆದಾಯದ ಬಗ್ಗೆ ಯಾವುದೇ ವಿವರ ಸಲ್ಲಿಸಿಲ್ಲ. ಆದರೆ, ನಿಮ್ಮ ಪತ್ನಿಯ ಹೆಸರಿನಲ್ಲಿ ದಿ:30/11/98ರಂದು ರೂ.58,000/- ಗಳಿಗೆ ಹಾವೇರಿ ತಾಲ್ಲೂಕ್ ಇಜಾರಿ ಲಕಮಾಪುರ ಗ್ರಾಮದ ಬಿನ್ ಶೇತ್ಕಿ ಸರ್ವೆ ನಂ.23 ಪ್ಲಾಟ್ ನಂ.13 ಕ್ಷೇತ್ರ 2 ಗುಂಟೆ 2.5 ಆಣೆ ನಿವೇಶನವನ್ನು ಶ್ರೀ.ಅಣ್ಣಪ್ಪ ಬಿನ್ ಮಾಹೇಶ್ವರ ಸಾನು ರವರಿಂದ ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತೀರಿ. ಆಸನೌ ಆದ ನಿಮ್ಮ ಪತ್ನಿಯು ಕೆಸಿಎಸ್ ನಡತೆ ನಿಯಮಾವಳಿಯ ಕಲಂ 2(ಸಿ) ಅಡಿಯಲ್ಲಿ ವ್ಯಾಖ್ಯಾನಿಸಿದಂತೆ ಆಸನೌ ಆದ ನಿಮ್ಮ ಕುಟುಂಬದ ಓರ್ವ ಸದಸ್ಯೆಯಾಗಿದ್ದು, ಅವರಿಗೆ ಆದಾಯದ ಮೂಲದ ಬಗ್ಗೆ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ ಸದರಿ ಸ್ವತ್ತನ್ನು ಆಸನೌ ನಿವೇ ನಿಮ್ಮ ಪತ್ನಿಯ ಹೆಸರಿನಲ್ಲಿ ಖರೀದಿಸಿದ್ದೀರಿ. ಸದರಿ ಸ್ವತ್ತನ್ನು ಖರೀದಿಸುವ ಮೊದಲು ಆಸನೌ ಆದ ನೀವು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ.

ಆದ್ದರಿಂದ, ಆಸನೌ ಆದ ನೀವು ಸೂಚಿತ/ ನಿರ್ದೇಶಿತ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಮೇಲೆ ಹೇಳಿದ ಸ್ಥಿರ ಸ್ವತ್ತನ್ನು ಖರೀದಿಸಿದ್ದು ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23 ಮತ್ತು 21(4) ಅನ್ನು ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

3) ಆಸನೌ ಆದ ನೀವು ಹೆಸರಿನಲ್ಲಿ ಹೊಂಡಾ ಕಂಪನಿ ಸ್ಕೂಟರ್ ನಂ.ಕೆಎ 27 ಇಇ 1606 ನೋಂದಣಿಯ ಸಂಖ್ಯೆಯ ದ್ವಿಚಕ್ರ ವಾಹನ ಇದ್ದು ಸದರಿ ಮೋಟಾರು ಬೈಕ ಹಿಂದುಜಾ ಲೇಲ್ಯಾಂಡ್ ಫೈನಾನ್ಸ್, ಹಾವೇರಿ ಶಾಖೆಗೆ ಹೈಯರ್ ಪರ್ಚೆಸ್ ಆಗಿದ್ದು, ಸದರಿ ವಾಹನ ಖರೀದಿ ಮತ್ತು ಸದರಿ ಬ್ಯಾಂಕ

ಸಾಲಕ್ಕೆ ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆಸನೌ ಆದ ನೀವು ಮೇಲೆ ಹೇಳಿದ ಚರ ಸ್ವತ್ತನ್ನು ಖರೀದಿಸಲು ಬ್ಯಾಂಕ ಸಾಲವನ್ನು ಪಡೆದದ್ದು ಸದರಿ ವಿಚಾರವನ್ನು ನಿರ್ದೇಶಿತ ಪ್ರಾಧಿಕಾರಕ್ಕೆ ವರದಿ ಸಲ್ಲಿಸದೇ ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23 ಮತ್ತು 21(4) ಅನ್ನು ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

## ಅನುಬಂಧ–2
## ದೋಷಾರೋಪಣೆ ವಿವರ

ದಾವಣಗೆರೆ ವಿನೋಭನಗರ 4ನೇ ಮುಖ್ಯ ರಸ್ತೆಯ ನಿವಾಸಿಯಾದ ಶ್ರೀ.ಕೆ.ಮಣಿಕಂಠ ಬಿನ್ ಕೆ.ಕರುಣಾಕರನ್, ಜಿಲ್ಲಾಧ್ಯಕ್ಷರು, ಶ್ರೀರಾಮ ಸೇನೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಹಾವೇರಿ ಜಿಲ್ಲೆ ಬ್ಯಾಡಗಿ ಉಪವಿಭಾಗದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಸೈಯ್ಯದ್ ಮುಸ್ತಕ್ ಅಹಮ್ಮದ್‌ರವರು ಅಕ್ರಮ ಆಸ್ತಿ ಸಂಪಾದನೆ ಗಳಿಸಿದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

ದೂರಿನ ಸಂಕ್ಷಿಪ್ತ ವಿವರಣೆ:– ಆಸನೌ ರವರು ಸರ್ಕಾರಿ ನೌಕರರಾಗಿದ್ದು, ಹಲವಾರು ಲೋಪದೋಷಗಳನ್ನು ಎಸಗಿ ಸರ್ಕಾರಕ್ಕೆ ವಂಚನೆ ಮಾಡಿ, ಸರ್ಕಾರದ ಅನುದಾನವನ್ನು ದುರುಪಯೋಗ ಪಡಿಸಿಕೊಂಡು ಅಕ್ರಮ ಆಸ್ತಿಯನ್ನು ಹೊಂದಿ ತನ್ನ

ಪತ್ನಿ, ಮಕ್ಕಳು ಮತ್ತು ತನ್ನ ಪತ್ನಿಯ ಸಂಬಂಧಿಗಳ ಹೆಸರಿಗೆ ಅಕ್ರಮ ಆಸ್ತಿಗಳನ್ನು ಮಾಡಿರುವುದಾಗಿ ಹೇಳಿದ್ದಾರೆ.

ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಈ ಸಂಸ್ಥೆಯು ಹಾವೇರಿ ಜಿಲ್ಲೆಯ ಆರಕ್ಷಕ ಅಧೀಕ್ಷಕರನ್ನು ಕೇಳಲಾಗಿ, ಆರಕ್ಷಕ ಉಪಾಧೀಕ್ಷಕ (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

ಆಸನೌ ರವರು 27/07/89ರಲ್ಲಿ ಕಿರಿಯ ಅಭಿಯಂತರರಾಗಿ ನೇಮಕಗೊಂಡು ವಿವಿಧ ಕಡೆ ಕಾರ್ಯನಿರ್ವಹಿಸಿ, ಪ್ರಸ್ತುತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬ್ಯಾಡಗಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರು ಮೂಲತಃ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ಗ್ರಾಮದವರಾಗಿದ್ದಾರೆ. ಆಸನೌ ರವರು 1993ರಂದು ಶ್ರೀಮತಿ.ಸಯೀದಾ ಮೊಹೀಬಾ ಇಮಾಂ ಎಂಬುವವರನ್ನು ವಿವಾಹ ಮಾಡಿಕೊಂಡಿದ್ದು. ಆಸನೌ ರವರ ಒಬ್ಬ ಗಂಡು ಮಗ ಶ್ರೀ.ಸೈಯದ್ ಜಮೀರ್ ಅಹಮ್ಮದ್ ರವರು ಸೌಧಿ ಅರೇಬಿಯಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, 3 ಜನ ಹೆಣ್ಣು ಮಕ್ಕಳನ್ನು ಈಗಾಗಲೇ ವಿವಾಹ ಮಾಡಿಕೊಟ್ಟಿದ್ದು, ಅವರವರ ಪತಿಯ ಮನೆಯಲ್ಲಿ ವಾಸವಾಗಿದ್ದಾರೆ. ಆಸನೌ ರವರ ಆಸ್ತಿ–ಋಣ ಧಾಯಿತ್ವ ಪಟ್ಟಿ ಪಡೆಯಲು ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರನ್ನು ಕೇಳಲಾಗಿ, ಯಾವುದೇ ಮಾಹಿತಿಯನ್ನು ನೀಡಿಲ್ಲ. ಆದರೆ, 2016–17ನೇ ಸಾಲಿನ ವಾರ್ಷಿಕ ಆಸ್ತಿ–ಋಣ ಧಾಯಿತ್ವ ಪಟ್ಟಿಯನ್ನು ಪಡೆಯಲಾಗಿ, 1)ಆಸನೌ ರವರು ಮತ್ತು ಅವರ ಸಹೋದರರಿಗೆ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕ್‌ನಲ್ಲಿ ಸರ್ವೆ ನಂ.52/2 3 ಎಕರೆ 20 ಗುಂಟೆ ಜಮೀನು ಪಿತ್ರಾರ್ಜಿತವಾಗಿ ಬಂದಿದೆ; 2)ತುಮಕೂರು ತಾಲ್ಲೂಕ್ ಕಸಬಾ ಹೋಬಳಿ ವೀರ ಸಾಗರ ಗ್ರಾಮದ ಸರ್ವೆ ನಂ.7/1ಎ ಕ್ಷೇತ್ರ 2.04 ಗುಂಟೆ ನಿವೇಶನವನ್ನು ದಿ:27/05/10ರಂದು ರೂ.2,25,000/– ಗಳಿಗೆ ಖರೀದಿಸಿದ್ದಾರೆ; 3)ಆಸನೌ ರವರ ಪತ್ನಿಯ ಹೆಸರಿನಲ್ಲಿ ದಿ:30/11/98ರಂದು ಹಾವೇರಿ ತಾಲ್ಲೂಕ್ ಇಜಾರಿ ಲಕಮಾಪುರ ಗ್ರಾಮದ ಬಿನ್ ಶೇತ್ಕಿ ಸರ್ವೆ ನಂ.23

ಪ್ಲಾಟ್ ನಂ.13 ಕ್ಷೇತ್ರ 2 ಗುಂಟೆ 2.5 ಆಣೆ ನಿವೇಶನವನ್ನು ರೂ.58,000/-ಗಳಿಗೆ ಖರೀದಿಸಿದ್ದು, ಸದರಿ ನಿವೇಶನದಲ್ಲಿ ಮನೆ ನಿರ್ಮಿಸಲು ವಿಜಯಾ ಬ್ಯಾಂಕ್, ಹಾವೇರಿ ಯಲ್ಲಿ ರೂ.3 ಲಕ್ಷ ಸಾಲ ಪಡೆದು ಮರು ಪಾವತಿ ಮಾಡಿದ್ದಾರೆ. ಸದರಿ ಮನೆಯ ನೆಲ ಮಹಡಿಯನ್ನು ರೂ.6,000/-ಗಳಿಗೆ ಬಾಡಿಗೆಗೆ ನೀಡಿದ್ದಾರೆ; 4)ಆಸನೌ ರವರು 2015ರಲ್ಲಿ ಹೊಂಡಾ ಕಂಪನಿ ಸ್ಕೂಟರ್ ನಂ.ಕೆಎ 27 ಇಇ 1606ನ್ನು ಖರೀದಿಸಿದ್ದಾರೆ. ತಮ್ಮ ಸೇವಾವಧಿಯಲ್ಲಿ ಒಟ್ಟು ರೂ.56,14,426/-ಗಳ ವೇತನವನ್ನು ಪಡೆದುಕೊಂಡಿರುವುದಾಗಿ ಹೇಳಿದ್ದಾರೆ.

ತನಿಖಾಧಿಕಾರಿಗಳ ವರದಿಗೆ ಆಸನೌ ರವರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಆಸನೌ ರವರು ತಮ್ಮ ಆಕ್ಷೇಪಣೆಯಿಲ್ಲವೆಂದು ಹೇಳಿ, ಸೇವಾ ವಿವರವನ್ನು ಸಲ್ಲಿಸಿದ್ದಾರೆ.

ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಆಸನೌ ರವರು 1989ರಲ್ಲಿ ಕಿರಿಯ ಅಭಿಯಂತರರಾಗಿ ಸರ್ಕಾರಿ ಸೇವೆಗೆ ಸೇರಿದ್ದು, ತನಿಖಾ ವರದಿಯನ್ವಯ ಅವರು ಮತ್ತು ಅವರ ಪತ್ನಿಯ ಹೆಸರಿನಲ್ಲಿ ಈ ಕೆಳಕಂಡ ಸ್ವತ್ತುಗಳಿವೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕ್ ಕಸಬಾ ಹೋಬಳಿ ಗೊರ್ಲಕಟ್ಟೆ ಗ್ರಾಮದ ಸರ್ವೆ ನಂ.52/2ರಲ್ಲಿ 3 ಎಕರೆ 20 ಗುಂಟೆ ಜಮೀನು ಆಸನೌ ರವರು ಮತ್ತು ಅವರ ಸಹೋದರ ಎಂದು ಹೇಳಲಾದ ಶ್ರೀ.ನಯಾಜ್ ಸಯ್ಯದ್ ಫಕ್ರುದ್ದೀನ್ ರವರ ಹೆಸರಿನಲ್ಲಿದೆ. ಸದರಿ ಸ್ವತ್ತು ಎಂಆರ್ ಹೆಚ್ 26/2013-14 ದಿ:04/03/14ರಂತೆ ಬಂದಿದೆಯೆಂದು 2016-17ನೇ ಪಹಣಿಯಲ್ಲಿ ಕಂಡು ಬರುತ್ತಿದ್ದು, ಸದರಿ ಸ್ವತ್ತು ಆಸನೌ ರವರ ತಂದೆ ಶ್ರೀ.ಸಯ್ಯದ್ ನಭಿ ಬಿನ್ ಸಯ್ಯದ್ ಅಹಮ್ಮದ್ ಸಾಬ್ ರವರಿಂದ ವರ್ಗಾವಣೆಯಾಗಿದ್ದು, ಸದರಿ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುವುದು ಕಂಡು ಬಂದಿದೆ;

ತುಮಕೂರು ತಾಲ್ಲೂಕ್ ಕಸಬಾ ಹೋಬಳಿ ವೀರ ಸಾಗರ ಗ್ರಾಮದ ಸರ್ವೆ ನಂ.7/1ಎ (ಅನ್ಯಕ್ರಾಂತವಾದ ಜಮೀನು) ರಲ್ಲಿ ನಿವೇಶನ ಸಂ.22 (30x50 ಚದರಡಿ) ಅನ್ನು ಶ್ರೀ.ಕೆ.ಟಿ.ಹರಿಪ್ರಸಾದ್ ರವರಿಂದ ದಿ:27/05/10ರಂದು ರೂ.2,25,000/-ಗಳಿಗೆ

ಆಸನೌ ರವರು ಖರೀದಿಸಿರುವುದು ತನಿಖಾಧಿಕಾರಿಗಳು ಹಾಜರುಪಡಿಸಿದ ನೋಂದಾಯಿತ ಕ್ರಯಪತ್ರದನ್ವಯ ಕಂಡು ಬಂದಿದೆ. ಸದರಿ ಸ್ಥಿರ ಸ್ವತ್ತನ್ನು ಬ್ಯಾಂಕ್ ಸಾಲ ಮತ್ತು ಕೈಸಾಲ ದಿಂದ ಅರ್ಜಿಸಲಾಗಿದೆಯೆಂದು ತನಿಖಾಧಿಕಾರಿಗಳು ಹಾಜರುಪಡಿಸಿದ 2016–17ನೇ ವರ್ಷಾಂತ್ಯಕ್ಕೆ ಆಸನೌ ರವರು ಸಲ್ಲಿಸಿದ ಆಸ್ತಿ ಧಾಯಿತ್ವ ಪಟ್ಟಿಯನ್ವಯ ಕಂಡು ಬಂದಿದೆ. ಸದರಿ ಸ್ವತ್ತನ್ನು ಖರೀದಿಸುವ ಮೊದಲು ಆಸನೌ ರವರು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆಯಾಗಲೀ ಹಾಗೂ ಸ್ವತ್ತನ್ನು ಖರೀದಿ ಮಾಡಲು / ಅರ್ಜಿಸಲು ಆದಾಯ ಮೂಲವೆಂದು ಆಸನೌ ರವರು ಹೇಳಿದ ಬ್ಯಾಂಕ್ ಸಾಲ ಮತ್ತು ಕೈಸಾಲ ಪಡೆಯುವ ಮೊದಲು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಗಳಿಲ್ಲ;

ಆಸನೌ ರವರ ಪತ್ನಿಯ ಆದಾಯದ ಬಗ್ಗೆ ತನಿಖಾ ವರದಿಯಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ, ಸದರಿಯವರ ಹೆಸರಿನಲ್ಲಿ ದಿ:30/11/98ರಂದು ರೂ.58,000/– ಗಳಿಗೆ ಹಾವೇರಿ ತಾಲ್ಲೂಕ್ ಇಜಾರಿ ಲಕಮಾಪುರ ಗ್ರಾಮದ ಬಿನ್ ಶೇತ್ಕಿ ಸರ್ವೆ ನಂ.23 ಪ್ಲಾಟ್ ನಂ.13 ಕ್ಷೇತ್ರ 2 ಗುಂಟೆ 2.5 ಆಣೆ ನಿವೇಶನವನ್ನು ಶ್ರೀ.ಅಣ್ಣಪ್ಪ ಬಿನ್ ಮಾಣೇಶ್ವರ ಸಾನು ರವರಿಂದ ಖರೀದಿಸಿದ ಬಗ್ಗೆ ನೋಂದಾಯಿತ ಕ್ರಯ ಪತ್ರದಲ್ಲಿ ಕಂಡು ಬಂದಿದೆ. ಸದರಿಯವರು ಕೆಸಿಎಸ್ ನಡತೆ ನಿಯಮಾವಳಿಯ ಕಲಂ 2(ಸಿ) ಅಡಿಯಲ್ಲಿ ವ್ಯಾಖ್ಯಾನಿಸಿದಂತೆ ಆಸನೌ ರವರ ಕುಟುಂಬದ ಓರ್ವ ಸದಸ್ಯೆಯಾಗಿದ್ದು, ಅವರಿಗೆ ಆದಾಯದ ಮೂಲದ ಬಗ್ಗೆ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ ಸದರಿ ಸ್ವತ್ತನ್ನು ಆಸನೌ ರವರೇ ತಮ್ಮ ಪತ್ನಿಯ ಹೆಸರಿನಲ್ಲಿ ಖರೀದಿಸಿದ್ದಾರೆಂದು ಹೇಳಬಹುದಾಗಿದೆ. ಸದರಿ ಸ್ವತ್ತನ್ನು ಖರೀದಿಸುವ ಮೊದಲು ಆಸನೌ ರವರು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಯಿಲ್ಲ. ಸದರಿ ನಿವೇಶನದಲ್ಲಿ ಆಸನೌ ರವರು ಮನೆ ನಿರ್ಮಿಸಿರುವುದಾಗಿ ಹೇಳಿದ್ದು, ಮನೆ ನಿರ್ಮಿಸಲು ಪಡೆದ ದಿ:08/06/1999ರ ಪರವಾನಿಗೆ ಪ್ರತಿಯಿದೆ. ಮನೆ ನಿರ್ಮಾಣ ಕಾಮಗಾರಿಯ ಮುಕ್ತಾಯಗೊಂಡ ದಾಖಲೆ ಇಲ್ಲ. ಸದರಿ ನಿವೇಶನದಲ್ಲಿ ಮನೆ ನಿರ್ಮಾಣ ಮಾಡಲು ಹಣದ ಮೂಲ ವಿಜಯಾ ಬ್ಯಾಂಕ್, ಹಾವೇರಿ ಯಲ್ಲಿ ಪಡೆದ ರೂ.3 ಲಕ್ಷ ಎಂದು ಹೇಳಿದ್ದು, ಸಾಲ ಪಡೆಯಲು ಆಸನೌ ರವರು ದಿ:10/03/2000ದಂದು

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಹಾವೇರಿ ರವರಿಂದ ಅನುಮತಿಯನ್ನು ಪಡೆದಿದ್ದಾರೆ;

ಆಸನೌ ರವರ ಹೆಸರಿನಲ್ಲಿ ಹೊಂಡಾ ಕಂಪನಿ ಸ್ಕೂಟರ್ ನಂ.ಕೆಎ 27 ಇಇ 1606 ನೋಂದಣಿಯ ಸಂಖ್ಯೆಯ ದ್ವಿಚಕ್ರ ವಾಹನ ಇರುವುದು ಬಿ–ವಹಿಯ ಪ್ರತಿಯಲ್ಲಿ ಸಾಬೀತಾಗುತ್ತದೆ. ಸದರಿ ವಾಹನವು ಹಿಂದುಜಾ ಲೇಲ್ಯಾಂಡ್ ಫೈನಾನ್ಸ್, ಹಾವೇರಿ ಶಾಖೆಗೆ ಹೈಯರ್ ಪರ್ಚೆಸ್ ಆಗಿದ್ದು, ವಹಿಯ ಕಾಲಂ 6ರಲ್ಲಿ ಕಂಡು ಬಂದಿದೆ. ಆದ್ದರಿಂದ, ಆಸನೌ ರವರು ಸಾಲ ಮಾಡಿ ಸದರಿ ವಾಹನವನ್ನು ಖರೀದಿಸಿದ್ದಾರೆಂದು ಹೇಳಬಹುದಾಗಿದೆ. ದ್ವಿಚಕ್ರ ವಾಹನವನ್ನು 2014–15ನೇ ಸಾಲಿನಲ್ಲಿ ಬ್ಯಾಂಕ್ ಸಾಲದಿಂದ ಖರೀದಿಸಿದೆಯೆಂದು ಋಣ ದಾಯಿತ್ವ ಪಟ್ಟಿಯಲ್ಲಿ ಆಸನೌ ರವರು ಘೋಷಿಸಿಕೊಂಡಿದ್ದು, ವಾಹನ ಖರೀದಿ ಮತ್ತು ಸದರಿ ಬ್ಯಾಂಕ್ ಸಾಲಕ್ಕೆ ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ದಾಖಲೆಗಳಿಲ್ಲ.

ದಾಖಲಾತಿಗಳ ಪರಿಶೀಲನೆಗಳಿಂದ ಕಂಡು ಬರುವ ಪ್ರಕಾರ, ಆಸನೌ ರವರು ಸೂಚಿತ / ನಿರ್ದೇಶಿತ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯದೇ ಎರಡು ಸ್ಥಿರ ಸ್ವತ್ತುಗಳನ್ನು ಖರೀದಿಸಿದ್ದು ಹಾಗೂ ಚರ ಸ್ವತ್ತು (ದ್ವಿಚಕ್ರ ವಾಹನ) ಅನ್ನು ಖರೀದಿಸಲು ಬ್ಯಾಂಕ್ ಸಾಲ ಪಡೆದಿದ್ದು, ಸೂಚಿತ / ನಿರ್ದೇಶಿತ ಪ್ರಾಧಿಕಾರಕ್ಕೆ ವರದಿಸದೇ, ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23 ಮತ್ತು 21(4) ಅನ್ನು ಉಲ್ಲಂಘನೆ ಮಾಡಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ತನಿಖಾಧಿಕಾರಿಗಳ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಆಸನೌ ರವರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆಸನೌ ರವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ

ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮ 3(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದು, ಆಸನೌ ರವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಆಸನೌ ರವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು–9 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.

5. On appearance, on 30-3-2019, plea/first oral statement of DGO was recorded and DGO did not plead guilty. DGO filed written statement on 10.1.2020

6. In the written statement, the DGO has specifically denied all the charges leveled against him. He contends that the allegations made in the Article of Charges are not specific and no separate enquiry has been conducted against the DGO. The DGO has taken permission on 10.3.2000 for construction of house at Haveri. The DGO has maintained all the accounts properly for utilization of the funds. There is abnormal delay in conducting and initiating the enquiry. Hence prayed for dropping the charges leveled against him.

7. On behalf of the disciplinary authority, the Investigating officer, Sri.Nagaraj Ambali, was examined as PW-1. Exs.P1 to P4 were marked.

8. DGO got examined himself as DW-1 and marked documents, Ex.D-1 to Ex.D-6.

9. Second oral statement of DGO was recorded. Heard the submissions of both the sides.

10. Hence, the point for consideration is-

(1) Whether the disciplinary authority proves the charges framed against DGO?

11. The finding is in the affirmative, for the following-

## REASONS

12. PW-1, the Deputy Superintendent of Police, Karnataka Lokayukta, Dharwad/ Investigation officer, in his evidence has mainly deposed that after receipt of complaint on 23.7.2017, he started investigation. The DGO joined for the Government service on 7.7.1989, as Assistant Engineer and discharged his duty in different capacities, in different places. On 27.5.2010, the DGO purchased site No. 22, situating in Sy. No.7/1A in Veerasagara village, for Rs. 2,25,000/- and for constructing a house therein he obtained permission. However, for purchasing the said site even though he has shown that he obtained hand loans and bank loan, he had not obtained prior permission for the same.

13. He further deposes that on 30.11.1998 DGO purchased plot No. 13, measuring 2 guntas 2.4 Anas, in converted Sy. No. 23, situating at Ijarilakamapura village, Haveri taluk, for Rs. 58,000/-. For that purpose also he had not obtained prior sanction. He further deposes that hypothecating to Hinduja Leyland Finance, Haveri, in 2015, he purchased two wheeler, bearing registration No. KA 27 EE 1606. For purchasing the same he had not obtained prior permission.

He filed the investigation report, Ex.P-1. Copies of registered sale deeds are Ex.P-2 and 3. R.C copy of the vehicle is Ex.P-4.

14. The DGO / DW-1 has deposed in accordance with what is stated / written in his written statement. Ex.D-1 to 6 are marked.

15. With regard to the 1st charge that the DGO purchased site No. 22, measuring 30X 50 ft., in converted Sy. No. 7/1A, situating at Veerasagara village, as per registered sale deed, dated: 27.5.2010, for Rs. 2,25,000/-, by obtaining hand loan and bank loan and in that regard he had not obtained prior sanction and DGO had not shown the source of income; PW-1 has clearly deposed to that effect. Ex.P-1, investigation report, also shows the same, except stating of obtaining of prior permission. Ex.P-2, registered sale deed, dtd: 27.5.2010, also shows the same. Further it is suggested to PW-1, in his cross examination, on behalf of the DGO that the said property is the ancestral property of the DGO; clearly shows that DGO owned the said property. Further DGO/ DW-1 in his cross examination has clearly admitted (1) purchasing of said property; (2) For the application, seeking permission, marked Ex.D-3, dated: 24.4.2010, his superior officers have not passed any order. Filing of application for sanction is not sufficient. Granting of prior permission is mandatory. Hence it probabalise that the DGO, without obtaining prior permission from the competent authority, purchased the said property and he has not shown the source, to purchase the same.

16. With regard to 2nd charge that the DGO purchased plot No. 13, measuring 2 guntas, 2.5 Anas, in converted sy. No. 23, situating at Ijarilakamapura village, for Rs. 58,000/-, as per registered sale deed, dtd: 30.11.98, in the name of his wife, Syeda Muheedha Bhanu, who had no independent source of income and in that regard he has not

obtained prior permission; PW-1 has clearly deposed to that effect. Further Ex.P-1, investigation report, also shows the same. Ex.P-3, registered sale deed, dtd: 30.11.98, also establishes the same. Further it is suggested to PW-1, on behalf of DGO that he had obtained prior permission from the competent authority to purchase the same; clearly establishes that the said property was purchased by him. DGO /DW-1 in his cross examination has also admitted that he purchased the said property, in the name of his wife, without obtaining prior permission. Further he has admitted that his superior officers have not passed any order with regard to Ex.D-1. Without taking contention, in the written statement, the DGO has contended that the said property was purchased in the name of his wife, from the amount funded by her father; cannot be accepted.

17. Hence, it probabalise that even though the wife of the DGO had no independent source of income, the said property was purchased by DGO, as per registered sale deed, dtd: 30.11.98, for Rs. 58,000/- .

18. With regard to purchase of two wheeler, bearing registration No. KA 27 EE 1606, by the DGO, in 2005, by hypothecating the same to Hinduja Leyland Finance company, Haveri; without prior sanction to purchase the same and by availing the bank loan; PW-1 has clearly deposed to that effect. Ex.P-1, investigation report, also shows the same, (except stating of obtaining of prior permission). Ex.P-4, RC/ Registration Certificate, shows the same. Further PW-1 in his cross examination has stated that he had obtained prior permission, but the same is not available. Further even though it is specifically suggested to PW-1 on behalf of DGO that for purchasing the said vehicle he had obtained prior permission; to

establish the same he has not produced the said sanction. Hence, it probabalise that the said two wheeler was purchased by the DGO, by hypothecating the same to a financial institution, without taking prior permission.

19. Even though on behalf of DGO Ex.D-1 to 6 are marked, the same cannot be considered. Because Ex.D-1, copy of the permission sought to build a house, in flat No. 13, situating at Ijarilakamapura village; even though the date 18.2.2000 is shown in the said copy of the letter, from the fresh colour of the ink of the signature of the official who received the original of the same and the fresh colour of the seal affixed; it appears that the said original was delivered very recently and obtained Ex.D-1 for the purpose of producing the same in this case.

20. Ex.D-2 is the letter, seeking permission for constructing a building in the said plot No. 13. From the reference No. 20/2000-2001 and the date shown therein, as 10.3.2000, it appears that the said letter is falsely created for the purpose of producing in this case. If the date of letter is 10.3.2000, then the reference of the said letter should have been 1999-2000 ( or 00).

21. Ex.D-3 is dtd: 24.4.2010, through which permission was sought to purchase the site No. 22, situating at Veerasagara village. However, DW-1 in his cross examination has clearly admitted that his superior officer has not passed any order in that regard and the said site was purchased, subsequently on 27.5.2020.

22. Ex.D-4 is dtd: 24.9.2012, showing permission was granted to DGO. However, that permission is relating to the immovable property situating in Haveri village of Haveri Taluk; which is not relating to his case.

23. Ex.D-5, Form No. 1, annexed to Ex.D-4, is also not relating to this case because that form No. 1 is also relating to an immovable property, situating in Haveri village of Haveri Taluk.

24. Ex.D-6 is dated 22.8.2013, is also not relating to this case, because the CEO, Zilla Panchayath, Haveri; has written a letter for according sanction to Chief Engineer, Panchayth Raj Department, in respect of immovable property, situating at Haveri village of Haveri Taluk.

25. Hence first of all DW-1 has not taken any contention in his written statement. Secondly there is no admission on behalf of the disciplinary authority in the cross examination of PW-1 and thirdly Ex.D-1 to Ex.D-6 are not shown that prior permissions were obtained by DGO to purchase the said two immovable properties and one movable property /motor cycle. Hence, the DGO has violated Rule 23, 21 (iv) of Karnataka Civil Services ( Conduct) Rules and DGO has failed to maintain absolute integrity and committed an act which is unbecoming of a Government Servant and therefore he is found guilty of misconduct. Hence the disciplinary authority has proved all the charges leveled against DGO. Hence, Point No. 1 is answered accordingly.

26. Point No. 2; In view of the answer to point No. 1, the following

FINDINGS

27. The Disciplinary Authority has proved all the charges leveled against DGO.

28. Hence this report is submitted to Hon'ble Upalokayukta -1 for further action.

29. The date of retirement of DGO is on 31.3.2022

(SHUBHAVEER.B)
Additional Registrar Enquiries-9
Karnataka Lokayukta, Bengaluru

List of witnesses examined on behalf of Disciplinary Authority

| |
|---|
| PW-1 Sri.Nagaraj Ambali, Retired DSP, Karnataka Lokayukta, Haveri |

List of documents marked on behalf of Disciplinary Authority

| |
|---|
| Ex.P1- Investigation report, dtd: 31.7.2017, submitted by PW-1 |
| Ex.P2 & 3- Registered Sale deeds |
| Ex.P4 - R.C copy of the vehicle. |

List of witnesses examined on behalf of DGO

| |
|---|
| DW-1 Sri. Syed Mustak Ahamad, the then Assistant Executive Engineer, |

List of documents marked on behalf of DGO

| |
|---|
| Ex.D-1 – Letter, dtd: 18.2.2000, from DGO to Executive Officer, Taluk Panchayath, Haveri. |
| Ex.D-2- Letter, dtd: 10.3.2000, from Executive Officer, Taluk Panchayath, Haveri to DGO |
| Ex.D-3 – Letter, dtd: 24.4.2010, from DGO, to Executive Officer, Taluk Panchayath Haveri. |
| Ex.D-4 – Letter, dtd: 24.9.2012, from Assistant Executive Engineer, Panchayath Raj Engineering Sub-Division, Savanur; to Chief |

| | |
|---|---|
| | Executive Officer, Zilla Panchayath, Haveri. |
| Ex.D-5 – Form No. 1, Estimation and Plan | |
| Ex.D-6 – | letter, dtd: 22.8.2013, from Chief Executive Officer, Zilla Panchayath, Haveri; to Chief Engineer Panchayath Raj Engineering Department, Bengaluru |

29.11.23

(SHUBHAVEER.B)
Additional Registrar Enquiries-9
Karnataka Lokayukta, Bengaluru

**ಕರ್ನಾಟಕ ಸರ್ಕಾರ**

**ಕರ್ನಾಟಕ ಲೋಕಾಯುಕ್ತ**

ನಂ:ಉಪಲೋಕ್–1/ಡಿಇ/22/2019/ಎ.ಆರ್.ಇ–09

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001.
ದಿನಾಂಕ: 29ನೇ ನವೆಂಬರ್ 2023.

**–:: ಶಿಫಾರಸ್ಸು ::–**

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ ಸ್ಯೆಯದ್ ಮುಸ್ತಾಕ್ ಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ,ಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಬ್ಯಾಡಗಿ, ಹಾವೇರಿ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಆದೇಶ ಸಂಖ್ಯೆ: ಗ್ರಾಅಪ 47 ಇಎನ್‌ಕ್ಯೂ 2018, ಬೆಂಗಳೂರು, ದಿನಾಂಕ: 12/11/2018

(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ. ಉಪಲೋಕ್–1/ಡಿಇ/22/2019, ಬೆಂಗಳೂರು, ದಿನಾಂಕ: 21/01/2019.

(3) ಅಪರ ನಿಬಂಧಕರು ವಿಚಾರಣೆಗಳು–09, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 29/11/2023.

*****

ಸರ್ಕಾರದ ಆದೇಶ ದಿನಾಂಕ: 12/11/2018 ರಂತೆ ಶ್ರೀ ಸ್ಯೆಯದ್ ಮುಸ್ತಾಕ್ ಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ,ಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಹರಪನಹಳ್ಳಿ, ಬ್ಯಾಡಗಿ, ಹಾವೇರಿ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್-1/ಡಿಇ/22/2019, ಬೆಂಗಳೂರು, ದಿನಾಂಕ: 21/01/2019ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-9 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ ಸೈಯದ್ ಮುಸ್ತಾಕ್ ಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಬ್ಯಾಡಗಿ, ಹಾವೇರಿ ಜಿಲ್ಲೆ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

**<u>ಅನುಬಂಧ-1</u>**

**<u>ದೋಷಾರೋಪಣೆ</u>**

ಆಸನೌ ಆದ ನೀವು –

ತುಮಕೂರು ತಾಲ್ಲೂಕ್ ಕಸಬಾ ಹೋಬಳಿ ವೀರ ಸಾಗರ ಗ್ರಾಮದ ಸರ್ವೆ ನಂ.7/1ಎ (ಅನ್ಯಕ್ರಾಂತವಾದ ಜಮೀನು) ರಲ್ಲಿ ನಿವೇಶನ ಸಂ.22 (30x50 ಚದರಡಿ) ಅನ್ನು ಶ್ರೀ.ಕೆ.ಟಿ.ಹರಿಪ್ರಸಾದ್ ರವರಿಂದ ದಿ:27/05/10 ರಂದು ರೂ.2,25,000/-ಗಳಿಗೆ ಆಸನೌ ರವರು ಖರೀದಿಸಿರುತ್ತೀರಿ. ಸದರಿ ಸ್ಥಿರ ಸ್ವತ್ತನ್ನು ಬ್ಯಾಂಕ್ ಸಾಲ ಮತ್ತು ಕೈಸಾಲ ದಿಂದ ಅರ್ಜಿಸಲಾಗಿದೆಯೆಂದು ತಿಳಿಸಿದ್ದು ಸದರಿ ಸ್ವತ್ತನ್ನು ಖರೀದಿಸುವ ಮೊದಲು ಆಸನೌ ಆದ ನೀವು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆಯಾಗಲೀ ಹಾಗೂ ಸ್ವತ್ತನ್ನು ಖರೀದಿ ಮಾಡಲು / ಅರ್ಜಿಸಲು ಆದಾಯ ಮೂಲವೆಂದು ಆಸನೌ ಆದ ನೀವು ಹೇಳಿದ ಬ್ಯಾಂಕ್ ಸಾಲ ಮತ್ತು ಕೈಸಾಲ ಪಡೆಯುವ ಮೊದಲು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

ಆದ್ದರಿಂದ, ಆಸನೌ ಆದ ನೀವು ಸೂಚಿತ/ ನಿರ್ದೇಶಿತ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಮೇಲೆ ಹೇಳಿದ ಸ್ಥಿರ ಸ್ವತ್ತನ್ನು ಖರೀದಿಸಿದ್ದು ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23 ಮತ್ತು 21(4) ಅನ್ನು ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

ಆಸನೌ ಆದ ನೀವು ನಿಮ್ಮ ಪತ್ನಿಯ ಆದಾಯದ ಬಗ್ಗೆ ಯಾವುದೇ ವಿವರ ಸಲ್ಲಿಸಿಲ್ಲ. ಆದರೆ, ನಿಮ್ಮ ಪತ್ನಿಯ ಹೆಸರಿನಲ್ಲಿ ದಿ:30/11/98ರಂದು ರೂ.58,000/- ಗಳಿಗೆ ಹಾವೇರಿ ತಾಲ್ಲೂಕ್ ಇಜಾರಿ ಲಕಮಾಪುರ ಗ್ರಾಮದ ಬಿನ್ ಶೇತ್ಕಿ ಸರ್ವೆ ನಂ.23 ಪ್ಲಾಟ್ ನಂ.13 ಕ್ಷೇತ್ರ 2 ಗುಂಟೆ 2.5 ಆಣೆ ನಿವೇಶನವನ್ನು ಶ್ರೀ.ಅಣ್ಣಪ್ಪ ಬಿನ್ ಮಾಣೇಶ್ವರ ಸಾನು ರವರಿಂದ ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತೀರಿ. ಆಸನೌ ಆದ ನಿಮ್ಮ ಪತ್ನಿಯು ಕೆಸಿಎಸ್ ನಡತೆ ನಿಯಮಾವಳಿಯ ಕಲಂ 2(ಸಿ) ಅಡಿಯಲ್ಲಿ ವ್ಯಾಖ್ಯಾನಿಸಿದಂತೆ ಆಸನೌ ಆದ ನಿಮ್ಮ ಕುಟುಂಬದ ಓರ್ವ ಸದಸ್ಯೆಯಾಗಿದ್ದು, ಅವರಿಗೆ ಆದಾಯದ ಮೂಲದ ಬಗ್ಗೆ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ ಸದರಿ ಸ್ವತ್ತನ್ನು ಆಸನೌ ನೀವೇ ನಿಮ್ಮ ಪತ್ನಿಯ ಹೆಸರಿನಲ್ಲಿ ಖರೀದಿಸಿದ್ದೀರಿ. ಸದರಿ ಸ್ವತ್ತನ್ನು ಖರೀದಿಸುವ ಮೊದಲು ಆಸನೌ ಆದ ನೀವು ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ.

ಆದ್ದರಿಂದ, ಆಸನೌ ಆದ ನೀವು ಸೂಚಿತ/ ನಿರ್ದೇಶಿತ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಮೇಲೆ ಹೇಳಿದ ಸ್ಥಿರ ಸ್ವತ್ತನ್ನು ಖರೀದಿಸಿದ್ದು ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23 ಮತ್ತು 21(4) ಅನ್ನು ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

ಆಸನೌ ಆದ ನೀವು ಹೆಸರಿನಲ್ಲಿ ಹೊಂಡಾ ಕಂಪನಿ ಸ್ಕೂಟರ್ ನಂ.ಕೆಎ 27 ಇಇ 1606 ನೋಂದಣಿಯ ಸಂಖ್ಯೆಯ ದ್ವಿಚಕ್ರ ವಾಹನ ಇದ್ದು ಸದರಿ ಮೋಟಾರು ಬೈಕ ಹಿಂದುಜಾ ಲೇಲ್ಯಾಂಡ್ ಫೈನಾನ್ಸ್, ಹಾವೇರಿ ಶಾಖೆಗೆ ಹೈಯರ್ ಪರ್ಚೆಸ್ ಆಗಿದ್ದು, ಸದರಿ ವಾಹನ ಖರೀದಿ ಮತ್ತು ಸದರಿ ಬ್ಯಾಂಕ ಸಾಲಕ್ಕೆ ಸೂಚಿತ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆಸನೌ ಆದ ನೀವು ಮೇಲೆ ಹೇಳಿದ ಚರ ಸ್ವತ್ತನ್ನು ಖರೀದಿಸಲು ಬ್ಯಾಂಕ ಸಾಲವನ್ನು ಪಡೆದದ್ದು ಸದರಿ ವಿಚಾರವನ್ನು ನಿರ್ದೇಶಿತ ಪ್ರಾಧಿಕಾರಕ್ಕೆ ವರದಿ ಸಲ್ಲಿಸದೇ ಕೆಸಿಎಸ್ (ನಡತೆ) ನಿಯಮಗಳು, 1956ರ ನಿಯಮ 23 ಮತ್ತು 21(4) ಅನ್ನು ಉಲ್ಲಂಘನೆ ಮಾಡಿ ದುರ್ನಡತೆ ತೋರಿಸಿರುತ್ತೀರಿ.

ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದೀರಿ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು–9), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ ಸೈಯದ್ ಮುಸ್ತಾಕ್ ಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಹರಪನಹಳ್ಳಿ, ಬ್ಯಾಡಗಿ, ಹಾವೇರಿ ಜಿಲ್ಲೆ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ಸಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ರುಜುವಾತುಪಡಿಸಲು ಒಬ್ಬರು ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ–1 ರವರನ್ನು ವಿಚಾರಣೆಗೆ ಒಳಪಡಿಸಿ ಹಾಗೂ ನಿಶಾನೆ ಪಿ–1 ರಿಂದ ಪಿ–4 ರಂತೆ ದಾಖಲಾತಿಗಳನ್ನು ಗುರುತಿಸಲಾಗಿದೆ. ಆರೋಪಿತ ಸರ್ಕಾರಿ ನೌಕರರು ಸ್ವತ: ತಾವೇ ಡಿ.ಡಬ್ಲ್ಯೂ–1 ಆಗಿ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ನಿಶಾನೆ ಡಿ–1 ರಿಂದ ನಿಶಾನೆ ಡಿ–6 ರವರೆಗಿನ ದಾಖಲಾತಿಗಳನ್ನು ಗುರುತಿಸಲಾಗಿದೆ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸುವಂತೆ ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಆ.ಸ.ನೌಕರರ ಪ್ರಥಮ ಮೌಖಿಕ ಹೇಳಿಕೆಯ ಪ್ರಕಾರ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯಂತೆ, ದಿನಾಂಕ: 31/03/2022 ರಂದು ನಿವೃತ್ತಿ ಹೊಂದಿರುತ್ತಾರೆ.

8. ಆ.ಸ.ನೌಕರರಾದ ಶ್ರೀ ಸೈಯದ್ ಮುಸ್ತಾಕ್ ಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಹರಪನಹಳ್ಳಿ, ಬ್ಯಾಡಗಿ, ಹಾವೇರಿ ಜಿಲ್ಲೆ ರವರ

ವಿರುದ್ಧ ಸಾಭೀತಾಗಿರುವ ಆರೋಪದ ಸ್ವರೂಪವನ್ನು ಹಾಗೂ ಸಂದರ್ಭಗಳ ಸಂಪೂರ್ಣತೆಯನ್ನು ಪರಿಗಣಿಸಿ, ಆರೋಪಗಳನ್ನು ರುಜುವಾತುಪಡಿಸುವಲ್ಲಿ **'ಸಫಲವಾಗಿರುತ್ತದೆ'** ಎಂದು ನಿರ್ಣಯಿಸಿದೆ:-

> **'ಆ.ಸ.ನೌಕರರಾದ ಶ್ರೀ ಸೈಯದ್ ಮುಸ್ತಾಕ್ ಅಹ್ಮದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಬ್ಯಾಡಗಿ, ಹಾವೇರಿ ಜಿಲ್ಲೆ ರವರಿಗೆ ಅವರ ಪಿಂಚಣಿಯಿಂದ ಶೇಕಡ 5% ರಷ್ಟನ್ನು ಎರಡು ವರ್ಷ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ'.**

9. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

29/11/23

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
ಉಪಲೋಕಾಯುಕ್ತ-1,
ಕರ್ನಾಟಕ ರಾಜ್ಯ.